ಈ ನಿಯಮಾವಳಿಗಳಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸದಿರುವ ಇತರ ಪರಿಭಾಷೆಗಳು ಡೈರೆಕ್ಟರ್ ಜನರಲ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್, ನವದೆಹಲಿ ಹೊರಡಿಸಿರುವ ಮಾರ್ಗಸೂಚಿಗಳಂತೆ ಹಾಗೂ ರಾಜ್ಯ ಸರ್ಕಾರ/ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಮತ್ತು ಅವುಗಳನ್ನು ಒಕ್ಕಲಿಗರ ಸಂಘ ಕೈಗಾರಿಕಾ ತರಬೇತಿ ಸಂಸ್ಥೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. <u>ಸಿಬ್ಬಂದಿ ನೇಮಕಾತಿ:</u>**

ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಹಾಗೂ ನೇಮಕಾತಿಯ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ನೇಮಿಸಿಕೊಳ್ಳತಕ್ಕದ್ದು. ಷೆಡ್ಯೂಲ್-1 ರಲ್ಲಿ ನಮೂದಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

**6. <u>ಬೋಧಕ ಸಿಬ್ಬಂದಿ ಮಾದರಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:</u>**

(ಅ) ಡೈರೆಕ್ಟರ್ ಜನರಲ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್, ನವದೆಹಲಿ ಇವರು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಅನ್ವಯವಾಗುವ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಲಾಗಿದೆ. ಈ ಮಾರ್ಗಸೂಚಿಗಳು ಒಕ್ಕಲಿಗರ ಸಂಘ ಕೈಗಾರಿಕಾ ತರಬೇತಿ ಸಂಸ್ಥೆ, ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೂ ಅನ್ವಯಿಸತಕ್ಕದ್ದಾಗಿದೆ.

(ಆ) ಈ ಮಾರ್ಗಸೂಚಿಗಳ ಪ್ರಕಾರ ಕೈಗಾರಿಕಾ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಪ್ರತಿ ವೃತ್ತಿ (ಟ್ರೇಡ್) ಯಲ್ಲಿನ ಯೂನಿಟ್‌ಗಳ ಸಂಖ್ಯೆ ಆಧಾರದ ಮೇಲೆ ನೇಮಕ ಮಾಡಬೇಕಾಗಿದೆ. ಒಕ್ಕಲಿಗರ ಸಂಘ ಕೈಗಾರಿಕಾ ತರಬೇತಿ ಸಂಸ್ಥೆ, ಶ್ರೀಗಂಧದಕಾವಲ್, ಬೆಂಗಳೂರು ಇಲ್ಲಿ ಫಿಟ್ಟರ್ ಟ್ರೇಡ್, ಎಲೆಕ್ಟ್ರಿಷಿಯನ್ ಟ್ರೇಡ್ ಮತ್ತು ಎಲೆಕ್ಟ್ರಾನಿಕ್‌ಮೆಕ್ಯಾನಿಕ್ ಟ್ರೇಡ್‌ಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದ್ದು ಪ್ರತಿ ಕೋರ್ಸ್‌ನಲ್ಲಿ ಎರಡು ಯೂನಿಟ್‌ಗಳು (ಮೊದಲನೇ ವರ್ಷ ಜೂನಿಯರ್ ಮತ್ತು ಎರಡನೇ ವರ್ಷ ಸೀನಿಯರ್) ಇರುತ್ತವೆ. ಈ ಯೂನಿಟ್‌ಗಳ ಸಂಖ್ಯೆ ಪ್ರಕಾರ ಒಕ್ಕಲಿಗರ ಸಂಘ ಕೈಗಾರಿಕಾ ತರಬೇತಿ ಸಂಸ್ಥೆಗೆ ನಿಯಮಾನುಸಾರ ಅವಶ್ಯಕವಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನಿಗದಿಪಡಿಸಿ ಷೆಡ್ಯೂಲ್-1 ರಲ್ಲಿ ಅಳವಡಿಸಿದೆ.

(ಇ) ಉನ್ನತ ನಿಯಂತ್ರಣ ಪ್ರಾಧಿಕಾರ (ಅಪೆಕ್ಸ್ ಸಂಸ್ಥೆ) ಕಾಲಕಾಲಕ್ಕೆ ಹೊರಡಿಸುವ ತಿದ್ದುಪಡಿಗಳು/ ಪರಿಷ್ಕೃತ ಮಾರ್ಗಸೂಚಿಗಳನ್ನು ಕಾರ್ಯಕಾರಿ ಸಮಿತಿಯು ಸಂಸ್ಥೆಗೆ ಅಳವಡಿಸಿಕೊಳ್ಳಲು ಅನುಮೋದಿಸುವುದಕ್ಕೆ ಬದ್ಧವಾಗಿ ಅವುಗಳನ್ನು ಅನ್ವಯಿಸತಕ್ಕದ್ದಾಗಿದೆ.

**7. <u>ಬೋಧನಾ ಮತ್ತು ಸೂಪರ್‌ವೈಸರಿ ಸಿಬ್ಬಂದಿಗೆ ವೇಳಾ ಪಟ್ಟಿ:</u>**

(ಅ) ಟ್ರೈನಿಂಗ್ ಆಫೀಸರ್, ಅಲೈಡ್ ಟ್ರೇಡ್ ಇನ್‌ಸ್ಟ್ರಕ್ಟರ್, ವೊಕೇಶನಲ್ ಇನ್‌ಸ್ಟ್ರಕ್ಟರ್ (ಪ್ರಾಕ್ಟಿಕಲ್), ವೊಕೇಶನಲ್ ಇನ್‌ಸ್ಟ್ರಕ್ಟರ್ (ಥಿಯರಿ, ವರ್ಕ್‌ಶಾಪ್ ಕ್ಯಾಲುಕ್ಯುಲೇಷನ್ ಹಾಗೂ ವಿಜ್ಞಾನ ಮತ್ತು ಇಂಜಿನಿಯರಿಂಗ್ ಡ್ರಾಯಿಂಗ್) ಹುದ್ದೆಗಳು ಒಳಗೊಂಡಂತೆ ಪ್ರತಿಯೊಬ್ಬ ಬೋಧನಾ ಮತ್ತು ಸೂಪರ್‌ವೈಸರಿ ಸಿಬ್ಬಂದಿಯು ವಾರದಲ್ಲಿ ಪ್ರತಿದಿನ ನಿರ್ವಹಿಸಬೇಕಾದ ಕೆಲಸದ ವಿವರಗಳನ್ನೊಳಗೊಂಡ ವೇಳಾಪಟ್ಟಿಯನ್ನು ನಿಗದಿಪಡಿಸತಕ್ಕದ್ದು. ಈ ವೇಳಾಪಟ್ಟಿಯ ಉದ್ದೇಶವು ಲಭ್ಯವಿರುವ ಪ್ರತಿ ಗಂಟೆ ಸಮಯವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳತಕ್ಕದ್ದಾಗಿದೆ.

